ಕೈಗಳಲ್ಲಿ ಎತ್ತಿ ಕಣ್ಣುಮಚ್ಚಿ ಕಣ್ಣು ತೆಗೆಯುವುದರೊಳಗೆ ಕಡಿದು ರುಂಡ ಮುಂಡಗಳನ್ನು ಬೇರ್ಪಡಿಸಿದ್ದ ಒಂದೇ ಏಟಿಗೆ. ಈಗ ರುದ್ರಣ್ಣನ ಮನೆಯಿಂದ ತಂದಿದ್ದ ಕೆಂಪು ಮಡಿವಸ್ತ್ರವನ್ನು ಗುಡ್ಡೆಕಲ್ಲಿನ ಸುತ್ತ ಹಿಡಿದು ಮರೆ ಮಾಡಿದರು. ಒಳಗೆ ಕೃಷ್ಣಪ್ಪ ಮಾತ್ರ ಇದ್ದ. ಒಳಗೆ ಕೃಷ್ಣಪ್ಪ ಗುಡ್ಡೆಕಲ್ಲಿನ ಪಕ್ಕ ಒಂದು ಮಾರುದ್ದ ಗುಂಡಿಯನ್ನು ತೆಗೆದು ಅದರೊಳಗೆ ನಾಲಗೆಯನ್ನು ಹೊರಚಾಚಿಕೊಂಡು ದೇಹದಿಂದ ಬೇರ್ಪಟ್ಟ ರುಂಡವನ್ನು ಇಟ್ಟು ಮುಚ್ಚಿದನು. ಮುಚ್ಚಿದ ಮಣ್ಣ ಮೇಲೆ, ಹೂವುಗಳನ್ನು ಇಟ್ಟು ಕಾಯಿಯನ್ನು ಒಡೆದು ಪೂಜೆ ಸಲ್ಲಿಸಿದನು. ಇದಾದ ಬಳಿಕ ಮಡಿ ಬಟ್ಟೆಯನ್ನು ತೆಗೆಯಲಾಯಿತು. ರುಂಡವಿಲ್ಲದ ದೇಹ ನೆಲದ ಮೇಲೆ ಬಿದ್ದಿತ್ತು. ಅದರ ಬಾಲದಲ್ಲಿ ಇನ್ನೂ ಜೀವ ಇದ್ದು ಅದು ಮಿಸುಕಾಡುತ್ತಿತ್ತು.

ಅದನ್ನು ಮುಗಿಸಿ, ಕೃಷ್ಣಪ್ಪ ಬಲಿಯಾಗಿದ್ದ ಹೋತದ ಮುಂಭಾಗದ ಕಾಲುಗಳನ್ನು ಮತ್ತು ಹಿಂಗಾಲುಗಳನ್ನು ಕಟ್ಟಿಕೊಂಡು ಅವುಗಳ ಒಳಗೆ ಒಂದು ಬಿದಿರಿನ ಗಳವನ್ನು ಸಿಕ್ಕಿಸಿಕೊಂಡು ಗುಡ್ಡೆಗೆ ಬಂದಿದ್ದವರಲ್ಲಿ ಒಬ್ಬ ವ್ಯಕ್ತಿಯ ಸಹಾಯದಿಂದ ಭುಜದ ಮೇಲೆ ಇಟ್ಟುಕೊಂಡು ಮನೆಗೆ ಬಂದ. ಇವನ ಜೊತೆಗೆ ಬಂದಿದ್ದ ವ್ಯಕ್ತಿಗೆ, 'ಬೆಳಗ್ಗಿಕೆ ಬಂದು ಬಿಡು, ಇಲ್ಲೆ ಕಾಫಿ ಕುಡಿವಂತೆ. ಮಾಂಸ ಇಸಕೊಂಡು ಹೋಗುವಂತೆ' ಎಂದ. ಅವನು ಹೋದ.

ಮನೆಯ ಹೊರಗಿನ ಚಪ್ಪರದ ಅಡಿಯಲ್ಲಿ ಲಕ್ಕಮ್ಮ ಮಲಗಿದ್ದಳು. 'ಲೇ ಇವಳೇ' ಎಂದ. ಧಡಕ್ಕನೆ ಎದ್ದ ಅವಳು, 'ಹಾಳಾದ್ದು ನಿದ್ರೆ, ಅದ್ಯಾವ ಮಾಯ್ದಾಗಿ ಬಂತೋ' ಎಂದು ಕಣ್ಣುಜ್ಜಿಕೊಳ್ಳುತ್ತ, 'ಈಗಿನ್ನು ಮಲಗಿದ್ದು ಹಂಗೆ ಜೋಂಪು ಬಂದು ನಿದ್ರೆ ಮಾಡಿದೆ' ಎಂದಳು. 'ಬಕೀಟ್ನಗೆ ನೀರಿಕ್ಕಿದಿಯಾ, ರಪ್ಪನ ಮುಖ ಕೈ ಕಾಲು ತೊಳಕೊಂಡು ಉಲ್ಡಿಕೆಬೇಕು. ನಸುಕಿಗೆ ಎದ್ದು ಎರಡುರುದು ಚರ್ಮ ಸುಲೀಬೇಕು. ಪಾಲಿಗೆ ಹೇಳಿದವರು ಹೊತ್ತಾರಿಗೆ ಬತ್ತಾರೆ' ಎಂದ. ತಂದಿದ್ದ ಬಲಿಗೊಂಡ ಹೋತದ ದೇಹವನ್ನು ಚಪ್ಪರದ ಅಡ್ಡ ಹಾಕಲಾಗಿದ್ದ ಗಳಕ್ಕೆ ಹಗ್ಗದಲ್ಲಿ ಕಟ್ಟಿ ನೇತು ಹಾಕಿದ. ರಕ್ತ ಇನ್ನೂ ತೊಟ್ಟಿಕ್ಕುತ್ತಿತ್ತು. ಅಂಗಿ, ಲುಂಗಿಯನ್ನು ಬಿಚ್ಚಿ ಟವಲನ್ನು ಅಲ್ಲಿಯೇ ಗೂಟಕೆ ಸಿಕ್ಕಿಸಿ ಬಚ್ಚಲಿಗೆ ಹೋಗಿ ಕೈ ಕಾಲು ಮುಖ ತೊಳೆದು ಬಂದ. ಅಲ್ಲಿದ್ದ ಟವಲಿನಿಂದ ಒರೆಸಿಕೊಂಡು ಪುನಃ ಅಂಗಿ, ಲುಂಗಿಯನ್ನು ಧರಿಸಿ ಹೊರಗಡೆ ಹಾಸಲಾಗಿದ್ದ ಚಾಪೆಯ ಮೇಲ ಅಂಗಾತ ಉರುಳಿಕೊಂಡ. ಮತ್ತೆ ತಕ್ಷಣಕ್ಕೆ, 'ಲೇ ಎಲ್ಲೇ ಓತ ಕಾಮ್ತಿಲ್ಲ, ಅದುರ ಗ್ಯಾನನೇ ಬರಲಿಲ್ಲ, ಈಗ ನೆನಿಸ್ಕೆಮ್ತಿದಿನಿ' ಎಂದು ಗಾಬರಿಯಲ್ಲಿ ಎದ್ದು ಕೂತ. ಎದ್ದು ಕೂತು, 'ನಾನು ಬಂದಾಗಿತ್ತೆ, ಹ್ಞಾ, ಕಾಮ್ಲಿಲ್ಲವಲ್ಲ, ಅದಿನ್ನೆಲ್ಲಿ ಮಾಯ್ವಾತೆ, ನೀನು ಮಲಿಕಣಕಿಂತ ಮುಂಚೆ ಇತ್ತೆ, ಜ್ಞಾಪಿಸಿಕೊ' ಎಂದು ಕೇಳಿದ ಹೆಂಡತಿ ಲಕ್ಕಮ್ಮನನ್ನು. ಲಕ್ಕಮ್ಮ ಆಶ್ಚರ್ಯದಿಂದ, 'ಅಯ್ಯೋ ಪರಮಾತ್ಮ! ಅದಿನ್ನೇಟ ಗಡ ಮಾಯ್ವಾತೆ, ಬೆಳಿಗಿಲಿ ಊರ್ನಾಗೆಲ್ಲ ಬಾಡೂಟ, ಪಾಲಿಗೇಳಿದವರಿಗೆ ಏನು ಹೇಳಬೇಕು, ಯಾವನು ಹೊಡಕೊಂಡುಹೋದ್ನೋ ಏನೋ' ಎಂದಳು. ಗಾಬರಿಯಿಂದ ಇಬ್ಬರೂ ಅಂಗಳದಿಂದ ಹೊರ ಬಂದರು.

ಕಾರ್ತಿಕ ಮಾಸದ ಕತ್ತಲು ತುಂಬಿಕೊಂಡಿತ್ತು. ಯಾವ ಪ್ರಾಣಿದು, ಮನುಷ್ಯರದು ಸದ್ದು ಇರಲಿಲ್ಲ. ಕತ್ತಲು ಮತ್ತು ಮೌನ ಒಂದನ್ನೊಂದು ತಬ್ಬಿಕೊಂಡು ಮಲಗಿದ್ದವು. ಹೊರಗಿನ ಇವರ ಗಾಬರಿಯ ಸದ್ದಿಗೆ ಒಳಗೆ ಮಲಿಕೊಂಡಿದ್ದ ಚುಕ್ಕಿ ಮತ್ತವಳ ಗಂಡ ಪ್ರಸಾದ ಎದ್ದು ಓಡಿಬಂದರು ಹೊರಗಡೆ. ಬಲಗಡೆಯ ಚಪ್ಪರದ ಅಡ್ಡಗಳದಲ್ಲಿ ಹೋತದ ಮರಿಯ ದೇಹ ನೇತಾಡುತ್ತಿತ್ತು. 'ಯಾಕಪ್ಪ ಏನಾತು ಎಂದಳು?' ಕೇಳಿದಳು ಚುಕ್ಕಿ. 'ಓತ ಕಾಮ್ತಿಲ್ಲ ಕಣೆ. ಅಯ್ಯೋ ಶಿವನೇ ಅದಿನ್ನೇನಾತು, ಕಣ್ಣೆ ಬಿಚ್ಚಿಕೊಂಡು ಎತ್ಲಗನ ಹೋಗೈತೇನು ನೋಡ್ರಿ ಸರಿಯಾಗಿ' ಅಂದು, ಅವಳ ಅಮ್ಮನಿಗೆ, 'ನೀನು ಹೊರಗೇ ಮಲಿಕೆಂಡಿದ್ದೆ' ಎಂದು ಕೇಳಿದಳು. 'ಹ್ಞೂ ಕಣೆ. ಯಾರಾದರು ಬಂದು ಬಿಚ್ಚಿಕೊಂಡು ಹೋಗಿದ್ದಿದ್ದರೆ ಅರುಸ್ಕೆಬೇಕಿತ್ತಲ್ಲ, ಹಗ್ಗ ಗೂಟದಲ್ಲಿ ಅಂಗೆ ಐತೆ. ಏನು ಮಾಯವಾ ಏನೋ'